1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿಸಿ.ಸಂಃ 804/2024**

ಪಿರ್ಯಾದಿಃ ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿತರು ರಂಗಸ್ವಾಮಿ.ಪಿ ಬಿನ್ ಲೇಟ್ ಬಂಗಾರು 26 ವರ್ಷ

ವಾಸಃ ಮೇಗಳಹುಂಡಿ ಗ್ರಾಮ, ಚಾಮರಾಜನಗರ ತಾಲ್ಲೂಕು

**ದೋಷಾರೋಪಣೆ**

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ನಂಜನಗೂಡು ತಾಲ್ಲೂಕು ಹೊಸಕೋಟೆ ತುಮ್ಮನೇರಳೆ ಗ್ರಾಮಕ್ಕೆ ಸೇರುವ ಕುರಹಟ್ಟಿ ಕಾವಲ್ ತೋಟದ ಮನೆಯಲ್ಲಿ ಚಾಸಾ.1 ರವರು ದಿಃ17.02.2024 ರಂದು ಮಧ್ಯಾಹ್ನ ಸುಮಾರು 12 ಗಂಟೆ ಸಮಯದಲ್ಲಿ ಇದ್ದಾಗ ಅಲ್ಲಿಗೆ ಆರೋಪಿತರಾದ ನೀವು ಬಂದು ಚಾಸಾ.1 ರವರನ್ನು ನೀರನ್ನು ಕುಡಿಯಲು ಕೇಳಿ ಚಾಸಾ. 1 ರವರು ನೀರನ್ನು ತಂದು ಕೊಟ್ಟು ವಾಪಸು ಮನೆಯ ಮುಂದೆ ಇದ್ದ ಬಚ್ಚಲು ಮನೆ ಮುಂದೆ ಇದ್ದಾಗ ಆರೋಪಿತರಾದ ನೀವು ಅಲ್ಲಿಗೆ ಬಂದು ಕುತ್ತಿಗೆಗೆ ಕೈ ಹಾಕಿ ಚಾಸಾ.1 ರವರ ಕತ್ತಿನಲ್ಲಿದ್ದ ಸುಮಾರು 23 ಗ್ರಾಂ ತೂಕದ ಚಿನ್ನದ ಪವಿತ್ರ ಕಟಿಂಗ್ ಮಾದರಿಯ ಚಿನ್ನದ ತಾಳಿ ಸರವನ್ನು ಸುಲಿಗೆ ಮಾಡಿಕೊಂಡು ಹೋಗಿರುತ್ತೀರಿ. ಆದ್ದರಿಂದ ಭಾರತ ದಂಡ ಸಂಹಿತೆ ಕಲಂ.392 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 06.04.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿಸಿ.ಸಂಃ 804/2024**

ಪಿರ್ಯಾದಿಃ ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿತರು ರಂಗಸ್ವಾಮಿ.ಪಿ ಬಿನ್ ಲೇಟ್ ಬಂಗಾರು 26 ವರ್ಷ

ವಾಸಃ ಮೇಗಳಹುಂಡಿ ಗ್ರಾಮ, ಚಾಮರಾಜನಗರ ತಾಲ್ಲೂಕು

ಃ ಆಪಾದನೆ ಃ

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?

ಆರೋಪಿ ಉತ್ತರಃ

ಪ್ರಶ್ನೆ.2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?

ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

ದಿನಾಂಕ ಃ**06.04.2026**

1 ನೇ ಹೆ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು